ಮುಚ್ಚಿಕೊಂಡಳು. ಕಣ್ಣು ಬಿಟ್ಟದ್ದೇ ರಾಜೇಶ್ವರಿಯಮ್ಮ ಉರಿಗಣ್ಣಿನಲ್ಲಿ ಎದುರಿಗೆ ಬಂದು ನಿಂತಂತಾಗಿ, ತಾನು ಹುಚ್ಚಿಯಂತೆ ಆಡುತ್ತಿದ್ದುದು ಹೊಳೆದು, ಬೆಚ್ಚಿದಳು. ಸರಿಯಾಗಿ ಕೂತು ನೆಲ ನೋಡುತ್ತ ಬೇಗ ಬರಲಿ ಬೇಗ ಬರಲಿ ಅನ್ನುತ್ತ ಜಪ ಮಾಡತೊಡಗಿದಳು.

ಆದರೆ, ಒಳಗಿನಿಂದ ಸದ್ದಿಲ್ಲ. ಅವರು ಒಳಗೆ ಹೋಗಿ ಆಸರೆಗೆ ಏನಾದರೂ ತರಲು ಹೋದರೋ, ಯಾರನ್ನೋ ಎಬ್ಬಿಸಿಕೊಂಡು ಬರಲು ಹೋದರೋ, ನಾನು ಹಾಲು ಕೇಳಲೋ, ಸಾಲ ಕೇಳಲೋ, ಏನನ್ನೋ ಬೇಡಿಕೊಳ್ಳಲೋ ಬಂದೆನೆಂದುಕೊಂಡರೋ... ನಾನು, ನನ್ನ ಉಸಿರುಸಿಕ್ಕಿಕೊಂಡು ನಿಂತ ಸ್ಥಿತಿಯನ್ನು ನೋಡಿ ಹೊರಳಿ ನಡೆದೇ ಬಿಟ್ಟವರ ಬೆನ್ನಿಗೇ ಕೂಗಿಬಿಡಬೇಕಿತ್ತು... ಸ್ವಲ್ಪ ಅರ್ಜೆಂಟ್ ಇದೆ... ನಿಲ್ಲಿ ಅಂತಾ... ಅಂದುಕೊಂಡಳು. ನಾನಂದುಕೊಂಡಂತೆ ಅಲ್ಲಿ ಘಟಿಸಿದ್ದರೆ... ಅಥವಾ ಇನ್ನೂ ಘಟಿಸಿರದಿದ್ದರೆ ನನ್ನ ಈ ಹೊಸ ಸಾಹಸಕ್ಕೆ ಅರ್ಥವಿಲ್ಲದೇ ಹೋದರೆ... ಚಡಪಡಿಕೆಯಾಯಿತವಳಿಗೆ.

ಎಲ್ಲಿಂದಲೋ ನಿಧಾನವಾಗಿ ಕ್ಷೀಣವಾಗಿ 'ಶಾ...' ಅಂತಾ ಕರೆದಂತಾಯಿತು. ಇಡೀ ಮೈ ಕಂಪಿಸಿತು. ಮರುಕ್ಷಣ ಎಲ್ಲ ಸಲೀಸು. ಎದ್ದು ನಿಂತು ಆ ಉದ್ದನೆಯ ಕಾಲುಹಾದಿಯ ದಿಕ್ಕಿನೆಡೆ ನೋಡಿದಳು... ಪಳ್ಳನೆ ಬೆಳಕು ಆ ತುದಿಯಿಂದ ಬಂದದ್ದೇ ಆ ಹೆಂಗಸು ಹಿತ್ತಿಲ ಬಾಗಿಲು ತೆರೆದು ಅಲ್ಲಿಂದ ನೇರ ಇವಳೆಡೆ ನಿಧಾನವಾಗಿ ನಡೆದು ಬರುತ್ತಿದ್ದಂತೆಯೇ ಅವಳ ನೆರಳಿನಾಕೃತಿ ಬರಬರುತ್ತಾ ದೊಡ್ಡದೊಡ್ಡದಾಗುತ್ತಿದ್ದಂತೆಯೇ ಆ ಇಡೀ ಬೆಳಕಿನ ಬಾಗಿಲನ್ನು ಈಕೆಯ ದೇಹ ಮುಚ್ಚಿ ಮುಚ್ಚಿ ಹತ್ತಿರ ಬಂದು... 'ತಕಾ... ಮಜ್ಜಿಗೆ ಕುಡಿ' ಅಂದಳು.

ಕೀ ಕೊಟ್ಟ ಗೊಂಬೆಯಂತೆ ಕೈ ಅನಾಯಾಸ ಮುಂದಕ್ಕೆ ಹೋಗಿ ಉದ್ದನೆಯ ಲೋಟದಲ್ಲಿನ ತಣ್ಣನೆಯ ಮಜ್ಜಿಗೆ ಪಡೆದುಕೊಂಡಿತು. 'ಮತ್ತೆ ಅದು ಅಲ್ಲಿ...' ಅನ್ನುತ್ತ ಪದಗಳನ್ನು ಹೊರಡಿಸಲೆತ್ನಿಸಿದ ಬಾಯಿ ದನಿಯನ್ನು ಕಳೆದುಕೊಂಡಿತ್ತು. ಬಹುಶಃ ಈ ಮಜ್ಜಿಗೆ ಕುಡಿದ ಮೇಲೆ ಎಲ್ಲ ಸಲೀಸಾಗಬಹುದು ಅಂದುಕೊಂಡಳು. ಎದುರಿಗೇ ತನ್ನ ಬೃಹದಾಕೃತಿಯನ್ನು ತೋರಿಸುತ್ತಲೇ ನಿಂತಿದ್ದ ರಾಜೇಶ್ವರಿಯಮ್ಮನಿಗೆ ಯಾವ ಕುತೂಹಲಗಳೂ ಇಲ್ಲದಂತಹ ನಿದ್ದೆಯಲ್ಲಿಯೇ ಇರುವಂತಹ ಮುಖಭಾವ. ಯಾಕೆ ಬಂದೆ, ಏನು ವಿಷಯ ಎಂದು ಕೇಳಲೇ ಇಲ್ಲ.

ಒಮ್ಮೆ ಎದುರಿಗೆ ನಿಂತವಳ ಮಜ್ಜಿಗೆ ಲೋಟವನ್ನು ಕುಡಿಯುತ್ತಲೇ ಎತ್ತುತ್ತ ನೋಡಿದಳು. ಅವಳ ನೋಟ ತನ್ನ ಕಾಲ್ಬೆರಳ ಮೇಲಿತ್ತು. ಒಮ್ಮೆಲೆ ಮೈಮೇಲೆ ನೀರು ಚೆಲ್ಲಿದಂತೆ ಕಂಪಿಸಿದಳು. ಕಾಲು ತೊಳೆದುಕೊಳ್ಳದೇ ಮಡಿಮೈಲಿಗೆಯ ಮನೆ ಮೆಟ್ಟಿ, ಒಳಗೆ ಬಂದು, ನಿದ್ರೆಯವಳ ಕದಲಿಸಿ, ಈಗ ಹಾಯಾಗಿ ಎಷ್ಟೊಂದು ಮಜ್ಜಿಗೆಯನ್ನು ಖಾಲಿಮಾಡುತ್ತಿದ್ದೇನಲ್ಲ. ಈ ತಪ್ಪಿಗೆ ಎಷ್ಟು ಶಿಕ್ಷೆ ಕೊಡಬಹುದು. ಯೋಚನೆ ಮುಗಿದಿರಲಿಲ್ಲ. ಲೋಟ ನಿರಾಯಾಸ ಕೆಳಗಿಳಿಯಿತು. ಮೆಟ್ಟಲಿಳಿದು ಕಾಣುತ್ತಿರುವ ನೀರಿನ ತೊಟ್ಟಿಯಲ್ಲಿ ಅದನ್ನು ತೊಳೆದುಕೊಡುವ ಕೆಲಸಕ್ಕೆ ಚಕ್ಕನೆ ತೊಡಗಬೇಕು ಎಂದು ಬುದ್ಧಿ ಹೇಳುತ್ತಿತ್ತು. ಆದರೆ, ಅದನ್ನು ಸದ್ಯದ ಪರಿಸ್ಥಿತಿ ವಿಲಕ್ಷಣ ರೀತಿಯಲ್ಲಿ ಆವರಿಸಿ ಕಟ್ಟಿಹಾಕಿದಂತಾಗಿ ಸುಮ್ಮನೇ ಇರುವಂತೆ ದೇಹ ನಿಷ್ಕ್ರಿಯವಾಗಿತ್ತು.

ಲೋಟವನ್ನು ಕೈಯಿಂದಲೇ ಪಡೆದು ತನ್ನ ಮಂಚದ ಪಕ್ಕದ ಗೂಡಿನಲ್ಲಿಟ್ಟು ಕೂತ ಹೆಂಗಸಿನ ಮುಖ ಸಣ್ಣಗೆ ನೀರು ಸೋಕಿಸಿಕೊಂಡು ಹೊಳೆಯುತ್ತಿತ್ತು...

'ಅ...ಲ್ಲಿ ನಿ...ಮ್ಮ...' ಅಂದಳು. ಅದರಲ್ಲಿ ಅರ್ಧವಷ್ಟೇ ಹೊರಗೆ ಬಂತು. ಸಮಾಧಾನ ಅನ್ನುವಂತೆ ತಲೆಯನ್ನು ನಿಧಾನವಾಗಿ ಆಡಿಸಿದವಳು ಹೆಜ್ಜೆ ಹಿಂದಿರಿಸಿ ಮರದ ಅಡ್ಡಬೆಂಚಿನ ಮೇಲೆ ಕೂತಳು. ದಪ್ಪನೆಯ ಎರಡೂ ಅಂಗೈಗಳು ಎರಡೂ ಮಂಡಿಗಳನ್ನು ಹಿಡಿದುಕೊಂಡಿದ್ದವು.

## 2

'ಏಯ್ ಪುಟ್ಟಿ...' ಅಂತಷ್ಟೇ ಅಂದು ತನ್ನ ಪಾಡಿಗೆ ತಾನು ನಡೆದು ಬಿಡುತ್ತಿದ್ದ ಅಜ್ಜನನ್ನು ಬಹಳ ವರ್ಷಗಳಿಂದ ನೋಡಿದ್ದಳು. 'ನಾನು ಹುಟ್ಟಿದಾಗಿನಿಂದ...' ಅನ್ನುವ ಪದಗುಚ್ಛವನ್ನು ಬಿಟ್ಟುಬಿಟ್ಟಿದ್ದಳು. ಏಕೆಂದರೆ ಮಕ್ಕಳಿಗೆ ತಿಳಿವಳಿಕೆ ಬರುವುದೇ ಮತ್ತಾಲ್ಕು ವರ್ಷಗಳ ನಂತರ. ಇಲ್ಲವಾದರೆ ತಾನು ಹುಟ್ಟಿದ್ದು ಬೇರೆಲ್ಲೋ ಅಂತೆ. ಆ ಮನೆ ಬೇರೆ ಅಂತೆ. ಆಗ ತನ್ನಪ್ಪನಿಗೆ ತಲೆತುಂಬ ಕೂದಲಿದ್ದವಂತೆ. ಅವ್ವಾವುವೂ